ಹಿಂದಿನ ಕಾಲದ ಗಂಡಸರು ಹೊಲ ಮನಿ ನೋಡಿಕ್ಯಂತಿದ್ರು. ಉತ್ತದು ಬಿತ್ತದು, ಕೂಲಿಗೆ ಬಂದ ಆಳ ಮಕ್ಕಳ ಬಟವಾಡಿ, ಕಾಳು ಕಡಿ ವ್ಯಾಪಾರ, ರೊಕ್ಕದ್ ವ್ಯವಾರ, ಆಸ್ತಿ, ಆಕಳ, ಸಂಬಂದ ಜೋಡ್ಸದು, ಸಂಬಂದಿಕ್ರ ಮದುವಿ, ಕರಿಯದು, ಕೇಳದು ಎಲ್ಲಾ ಮಾಡ್ತಿದ್ರು. ಊರು ಉಸಾಬರಿ ಎಂದೂ ಬ್ಯಾಡ ಅಂತಿದ್ದಿಲ್ಲ... ಅದುರ್ ಮ್ಯಾಲೆ ಊರ್ ಪಂಚಾತಿಗಿ, ಕೋರ್ಟು–ಕೇಸು, ಆಸ್ತಿ ವ್ಯಾಜ್ಯ... ಇದೆಲ್ಲದರಾಗೂ ಹತ್ತ್ ಇಲ್ಲಾ ಮ್ಯಾಲ ನಾಕು ಜನ ಲೀಗಲ್ ಮಕ್ಕಳು... ಇನ್ನೊಂದ್ಯಾಲ್ಡು–ನಾಕು ತ್ವಾಟದ್ ಮನಿಗೆ ಹೋಗಾ ಬರಾ ದಾರಿಯಾಗ ಆದವು... ಎಲ್ಲಾನೂ ಮೇನ್‌ಟೇನ್ ಮಾಡ್ತಿದ್ರಪ...

ಈಗಿನ್ ಗಂಡ್ಸುರಿಗೆ ಬರೇ ಓದಿದ್ ಮ್ಯಾಕ ನೌಕ್ರಿ ಹಿಡಿಯದು, ಒಂದ್ ಮದಿವಿ, ಒಂದೋ ಎರಡೊ ಮಕ್ಕಳು... ಸ್ವಲ್ಪ ಟೈಮಾದ್ಯಾಲ ವಾಟ್ಸಾಪಿನಾಗೋ–ಆಫೀಸಿನಾಗೋ ಒಂದು 'ಇಂಟ್ರೆಸ್ಟು' (ಅದೃಷ್ಟ ಇದ್ದರ) ಫೋನಿನ್ಯಾಗ ದಿನಿಸಿ ತರದು, ಕಂಪ್ಯೂಟ್ರಿನ್ಯಾಗ ಬಿಲ್ ಕಟ್ಟದು, ಇರಾ ಪುಟಗೋಸಿ ಮಕ್ಕಳುನ್ನ ಓದಿಸಿ ದಡ ಹಚ್ಚಾದು... ಇಷ್ಟ್ ಮಾಡಾಕ ಸತ್ತೇ ಹೋಕ್ಕರಪ್ಪ...'

'ಏ ಸ್ವಲ್ಪು ಕ್ಯಲಸ ಐತಿ. ಆಮ್ಯಾಲ ಫೋನ್ ಮಾಡ್ತನಿ...'

'ಬ್ಯಾಡ ಹೋಗಪ. ನನಿಗೂ ಕ್ಯಲಸ ಐತಿ ಮಗನ...'

'ಅಷ್ಟ್ ಮಾಡಿ ಪುಣ್ಯ ಕಟ್ಟಿಗ್ಯಳವ... ಇನ್ನೊಂದ್ಸಾರಿ ಮೆಸೇಜ ಮಾಡದುಲ್ಲ ನಿನಗ' ಅಂತ ಹೇಳಿ ಫೋನ್ ಇಟ್ಟ, ನನಗೂ ಸಮಾಧಾನ ಆಯಿತು.

ಟೆಕ್ನಾಲಜಿ ಅನ್ನುವುದು ಅಡುಗೆಮನೆಯ ವಿಚಾರದಲ್ಲಿ ಆಗಾಗ ಪ್ರಸ್ತಾಪ ಆಗುವ ವಿಷಯ. ತಮ್ಮ ಜೀವನ ಅಡುಗೆಮನೆಯಿಂದ ಹೊರಗೆ ಯಾವಾಗ ಬಂದೀತು ಅಂತ ಈಗಿನ ಪೀಳಿಗೆಯ ಹೆಣ್ಣುಮಕ್ಕಳು ಯೋಚಿಸಿಯೇ ಹೈರಾಣಾಗುತ್ತಾರೆ. ಆದರೆ, ದಿನಕ್ಕೆ ಎರಡು ಮೂರು ಸಾರಿ ಪೊಗದಸ್ತಾಗಿ ಊಟ ಚಪ್ಪರಿಸುತ್ತಲೇ ಕೆಲವು ಗಂಡಸರು ತಮ್ಮ ಅಮ್ಮ ಅಜ್ಜಿಯರ ಕಾಲಕ್ಕೆ ಹೋಲಿಸಿದರೆ ಈಗಿನ ಅಡುಗೆಮನೆ ಎಂಥಾ ಅನುಕೂಲಕರವಾಗಿದೆ, ಹೆಣ್ಣುಮಕ್ಕಳಿಗೆ ಅಲ್ಲಿ ಏನೂ ಕೆಲಸ ಇಲ್ಲ ಅನ್ನುವುದನ್ನ ಆಗಾಗ ಪ್ರಸ್ತಾಪಿಸುತ್ತಲೇ ತಾವು ಮಾತ್ರ ಅಡುಗೆಮನೆಯಿಂದ ಮಾರು ದೂರವೇ ಇರುತ್ತಾರೆ. ತಮಾಷೆ ಎಂದರೆ ಇದನ್ನ ಹೆಣ್ಣುಮಕ್ಕಳು ಕೂಡ ನಂಬಿರುತ್ತಾರೆ.

ಹಾಗೆ ನೋಡಿದರೆ ನಮಗೆಲ್ಲ ಅಡುಗೆ ಅಂದರೆ ದ್ವೇಷ ಅಂತ ಏನಿಲ್ಲ. ಗಂಡಸರು ಕ್ರೂರಿಗಳು ಅಂತಲೂ ಹೇಳ್ತಾ ಇಲ್ಲ. ಒಂದು ವಾಸ್ತವ ಹೇಗೆ ಭಿನ್ನ ನೆಲೆಗಟ್ಟಿನಲ್ಲಿ ಎರಡು ಲಿಂಗಗಳಿಗೆ ಗೋಚರ ಆಗುತ್ತೆ ಅನ್ನೋದನ್ನ ಯೋಚಿಸಿದರೆ ಈವತ್ತಿನ ಎಷ್ಟೋ ದಾಂಪತ್ಯ ಸಮಸ್ಯೆಗಳ ಬಿರುಕು ಶುರುವಾಗುವುದು ಬಹುತೇಕ ಅಲ್ಲಿಂದಲೇ ಅನ್ನುವುದು ಕಾಣಿಸುತ್ತೆ.

ಮೊಟ್ಟೆ ಮೊದಲೋ ಕೋಳಿ ಮೊದಲೋ ಅನ್ನುವ ಪ್ರಶ್ನೆ ಈವತ್ತಿಗೂ ವಿಕಾಸವಾದದ ರೂಪದಲ್ಲಿ ವಿಜ್ಞಾನಿಗಳನ್ನ ಕಾಡುತ್ತಿರಬಹುದು. ಆದರೆ, ನಾಳೆ ಬೆಳಗ್ಗೆ ತಿಂಡಿ ಏನು ಮಾಡಬೇಕು ಎನ್ನುವ ಪ್ರಶ್ನೆ ಮದುವೆ ಅನ್ನುವ ವ್ಯವಸ್ಥೆ ಶುರುವಾವಾದಾಗಿನಿಂದಲೂ ಹೆಣ್ಣುಮಕ್ಕಳನ್ನ ಬೆಂಬಿಡದೆ ಕಾಡುವ ಭೂತ. ಅಡುಗೆ ಮಾಡಲಿಕ್ಕೆ ಕೆಲಸದ ಸಹಾಯಕಿ ಇದ್ದಂಥ ಉಳ್ಳವರಿಗೂ ಅವಳಿಗೆ/ಅವನಿಗೆ ನಾಳೆ ಏನು ಮಾಡಲು ಹೇಳಬೇಕು ಎನ್ನುವ ಪ್ರಶ್ನೆ ಕೂಡ ಕೆಲಸವಲ್ಲದ ಕೆಲಸವೇ.

ಇತ್ತೀಚೆಗೆ ಇದನ್ನ ಯೋಚಿಸುತ್ತಿರುವಾಗ ಇನ್ನೊಬ್ಬ ಸ್ನೇಹಿತನ ನೆನಪಾಯ್ತು. ಸುಮಾರು ಎರಡು ದಶಕಗಳ ಹಿಂದಿನ ಮಾತು. ಸದಾ ಹಸಿದ ಸ್ಥಿತಿಯಲ್ಲೇ ಇರುತ್ತಿದ್ದ ಆ ಸ್ನೇಹಿತ ಎಲ್ಲವನ್ನೂ ಊಟಕ್ಕೆ ಸಮೀಕರಿಸಿ ಮಾತಾಡುವ ಅಭ್ಯಾಸ ಬೆಳೆಸಿಕೊಂಡಿದ್ದ. ಕಾಯಕವೇ ಕೈಲಾಸ ಎಂದರೆ ಪಾಯಸವೇ ಕೈಲಾಸ ಅನ್ನುವುದು, ತಾಳಿದವನು ಬಾಳಿಯಾನು ಅಂದರೆ ತಾಳಿದವನಿಗೆ ಬಾಳೆಹಣ್ಣು ಅನ್ನುವುದು ಹೀಗೆ "ಥಟ್ ಅಂತ ಹೇಳಿ" ಶೈಲಿಯಲ್ಲಿ ಏನೇನೋ ಸೃಷ್ಟಿ ಮಾಡಿಕೊಳ್ಳುತ್ತಿದ್ದ. ತೀರಾ ಸಣಕಲನ ಹಾಗೆ ಇದ್ದ ಅವನ ಅಪರಿಮಿತ ಹಸಿವೆ ಮಾತ್ರ ಬಹು ಸೋಜಿಗವಾಗಿ ಕಾಣುತ್ತಿತ್ತು. ಉಂಡದ್ದೆಲ್ಲಾ